# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ಗುಬ್ಬಿ

## ದಿನಾಂಕಃ 25.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು<br>ವರ್ಷ<br>ಕೆಲಸ<br>ವಾಸ್ತವ್ಯ | ಈಶ್ವರಯ್ಯ ಬಿನ್ ಲೇ. ನಂಜುಂಡಯ್ಯ<br>56 ವರ್ಷ<br>ವ್ಯವಸಾಯ<br>ಮಂಚೀಹಳ್ಳಿ |
| | ಸತ್ಯ ಪ್ರತಿಜ್ಞೆಯ **ಮೇರೆಗೆ** |

## ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಾದ ಶ್ರೀ ಎಸ್ ಜಿ ರವರಿಂದ

ನಿಪಿ.2 ಮತ್ತು 3 ಪಹಣಿ ಪತ್ರಿಕೆಗಳನ್ನು ತೋರಿಸಿ ಸದರಿ ದಾಖಲೆಗಳಲ್ಲಿ ನಿಮ್ಮ ತಂದೆಯ ಹೆಸರಿಗೆ ಎಷ್ಟು ಜಮೀನು ಬರೆದಿದ್ದಾರೆ ಎಂದು ಓದಿ ಹೇಳಿ ಎಂದು ಸಾಕ್ಷಿ ಅದನ್ನು ಓದಿ 2 ಎಕರೆ 19 ಗುಂಟೆ ಎಂದು ಬರೆದಿದ್ದಾರೆ ಎನ್ನುತ್ತಾರೆ. ನಾನು ನನ್ನ ತಂದೆಯಿಂದ ನನ್ನ ಹೆಸರಿಗೆ ಖಾತೆಯನ್ನು ಬದಲಾವಣೆ ಮಾಡಿಕೊಳ್ಳದೇ ಪ್ರತಿವಾದಿಗಳಿಗೆ ತೊಂದರೆ ಕೊಡಲು ಈ ದಾವೆಯನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಹಾಗೂ ಪ್ರತಿವಾದಿಯ ತಂದೆ ದಾವಾ ಸ.ನಂಬರ್ ಸ್ವತ್ತನ್ನು ವಿಭಾಗ ಮಾಡಿಕೊಂಡಿದ್ದು ಅವರವರ ಭಾಗಕ್ಕೆ ಬಂದ ಜಮೀನಿಗೆ ಖಾತೆ ಪಹಣಿ ಸಹ ಆಗಿರುತ್ತದೆ ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಯ ತಂದೆ ಜಯಣ್ಣ ನನ್ನ ದೊಡ್ಡಪ್ಪನ ಮಗ. ಸದರಿ ಜಯಣ್ಣ ಸ.ನಂ.6/1 ರಲ್ಲಿ ಅವರ ಭಾಗಕ್ಕೆ ಬಂದಿದ್ದ 17 ಗುಂಟೆ ಜಮೀನನ್ನು ಪ್ರತಿವಾದಿ 4 ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಅದೇ ರೀತಿ ಜಯಣ್ಣ ಅವರ ಭಾಗಕ್ಕೆ ಬಂದಿದ್ದ 15 ಗುಂಟೆ ಜಮೀನನ್ನು ಪ್ರತಿವಾದಿ 3 ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಅ ರೀತಿ ಮಾರಾಟ ಮಾಡುವ ಕಾಲಕ್ಕೆ ಸದರಿ ಜಮೀನುಗಳು ಖಾತೆ ಪಹಣಿ ಸದರಿ ಜಯಣ್ಣ ರವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ಖರೀದಿ ಮಾಡಿದ ಮೇಲೆ ಸದರಿ 17 ಹಾಗೂ 15 ಗುಂಟೆ ಜಮೀನಿನ ಖಾತೆ ಪಹಣಿ ಪ್ರತಿವಾದಿ 4 ರವರ

ಹೆಸರಿನಲ್ಲಿ ಬರುತ್ತದೆ ಎಂದರೆ ಸರಿ. ನಿಪಿ.1 ರಲ್ಲಿ 33 ಗುಂಟೆ ಜಮೀನು ಪ್ರತಿವಾದಿ 4 ರವರ ಹೆಸರಿನಲ್ಲಿ ಇದೆ ಎಂದರೆ ಸರಿ. ಪ್ರತಿವಾದಿಗಳು ನನಗೆ ದಾವಾಸ್ವತ್ತಿನಲ್ಲಿ ತೊಂದರೆ ಕೊಡದಿದ್ದರು ಸಹ ನಾನು ಅವರ ವಿರುದ್ಧ ಈ ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

**ಓ . ಹೇ. ಕೇ. ಸರಿ. ಇದೆ**

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ.

Pw1 present he is cross examined by defendant counsel fully .

Defendant counsel prays time for cross of Pw2.

Call on.25.11.2024.